ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2018–19 :** **ದಿನಾಂಕ : 04–09–2018**

# ಪತ್ರಿಕಾ ಆಮಂತ್ರಣ

1. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕಲಾ ನಿಕಾಯದ ಉದ್ಘಾಟನೆ ಸಮಾರಂಭ

**ಉದ್ಘಾಟನೆ:**

ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು,

**ಮುಖ್ಯ ಅತಿಥಿ:**

ಜಿ.ಟಿ. ದೇವೇಗೌಡ, ಉನ್ನತ ಶಿಕ್ಷಣ ಸಚಿವರು.

**ಅಧ್ಯಕ್ಷತೆ:**

ಆರ್. ರೋಷನ್ ಬೇಗ್,
ಮಾಜಿ ಸಚಿವರು ಹಾಗೂ ಶಾಸಕರು, ಶಿವಾಜಿನಗರ.

ದಿನಾಂಕ: 05–09–2018, ಬುಧವಾರ, ಸಮಯ : ಬೆಳಿಗ್ಗೆ 9.30 ಗಂಟೆಗೆ.
ಸ್ಥಳ: ಭೌತಶಾಸ್ತ್ರ ವಿಭಾಗ, ಸೆಂಟ್ರಲ್ ಕಾಲೇಜು ಕ್ಯಾಂಪಸ್, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.

2. ಉನ್ನತ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ಸರ್ಕಾರಿ ಕಾಲೇಜುಗಳ ಅಧ್ಯಾಪಕರ ಸಂಘ ಇವರ ಸಹಭಾಗಿತ್ವದಲ್ಲಿ ಶಿಕ್ಷಕರ ದಿನಾಚರಣೆ ಸಮಾರಂಭ – 2018.

ಉದ್ಘಾಟನೆ:
ಹೆಚ್. ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು

**ಮುಖ್ಯ ಅತಿಥಿಗಳು:**
ಡಿ.ವಿ. ಸದಾನಂದಗೌಡ,
ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮಗಳ ಅನುಷ್ಠಾನ ಸಚಿವರು,

ಅನಂತಕುಮಾರ್,
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರ ಸಚಿವರು.

ಶ್ರೀಮತಿ ನಿರ್ಮಲಾ ಸೀತಾರಾಮನ್,
ಕೇಂದ್ರ ರಕ್ಷಣಾ ಸಚಿವರು.

ದಿನಾಂಕ: 05–09–2018, ಬುಧವಾರ, ಸಮಯ : ಬೆಳಿಗ್ಗೆ 9.30 ಗಂಟೆಗೆ.
ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು

3. ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಶಿಕ್ಷಕರ ದಿನಾಚರಣೆ:

<u>**ಉದ್ಘಾಟನೆ:**</u>
ಡಾ. ಜಿ. ಪರಮೇಶ್ವರ್, ಉಪ ಮುಖ್ಯಮಂತ್ರಿಗಳು,

<u>**ಅಧ್ಯಕ್ಷತೆ:**</u>
ದಿನೇಶ್ ಗುಂಡೂರಾವ್, ಶಾಸಕರು, ಗಾಂಧಿನಗರ.

<u>**ಪ್ರಶಸ್ತಿ ಪ್ರದಾನ:**</u>
ಡಿ.ವಿ. ಸದಾನಂದಗೌಡ,
ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮಗಳ ಅನುಷ್ಠಾನ ಸಚಿವರು,

<u>**ಮುಖ್ಯ ಅತಿಥಿ:**</u>
ಅನಂತಕುಮಾರ್,
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರ ಸಚಿವರು.

ದಿನಾಂಕ: 05–09–2018, ಬುಧವಾರ, ಸಮಯ : ಬೆಳಿಗ್ಗೆ 10.00 ಗಂಟೆಗೆ.
ಸ್ಥಳ: ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು.

4. ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ ವತಿಯಿಂದ ಶಿಕ್ಷಕರ ದಿನಾಚರಣೆ :

<u>**ಉದ್ಘಾಟನೆ:**</u>
ಹೆಚ್. ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿಗಳು

**ಮುಖ್ಯ ಅತಿಥಿಗಳು:**

ಡಿ.ವಿ. ಸದಾನಂದಗೌಡ,
ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮಗಳ ಅನುಷ್ಠಾನ ಸಚಿವರು,

ಅನಂತಕುಮಾರ್,
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರ ಸಚಿವರು.

ಶ್ರೀಮತಿ ನಿರ್ಮಲಾ ಸೀತಾರಾಮನ್,
ಕೇಂದ್ರ ರಕ್ಷಣಾ ಸಚಿವರು.

**ಅಧ್ಯಕ್ಷತೆ:**

ಆರ್. ರೋಷನ್ ಬೇಗ್,
ಮಾಜಿ ಸಚಿವರು ಹಾಗೂ ಶಾಸಕರು, ಶಿವಾಜಿನಗರ.

ದಿನಾಂಕ: 05-09-2018, ಬುಧವಾರ, ಸಮಯ : ಬೆಳಿಗ್ಗೆ 11.00 ಗಂಟೆಗೆ.
ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು

5. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
ಶಿಕ್ಷಕರ ದಿನಾಚರಣೆ – 2018:

**ಮುಖ್ಯ ಅತಿಥಿ:**

ಡಿ.ಕೆ. ಶಿವಕುಮಾರ್
ಜಲಸಂಪನ್ಮೂಲ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು.

ದಿನಾಂಕ: 05-09-2018, ಬುಧವಾರ, ಸಮಯ : ಮಧ್ಯಾಹ್ನ 3.00 ಗಂಟೆಗೆ.
ಸ್ಥಳ: ಧನ್ವಂತರಿ ಸಭಾಂಗಣ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ,
4ನೇ "ಟಿ' ಬ್ಲಾಕ್, ಜಯನಗರ, ಬೆಂಗಳೂರು – 560 041

ಸಂಖ್ಯೆ: 943/1043

# ಪತ್ರಿಕಾ ಪ್ರಕಟಣೆ

## 2018–2019ನೇ ಸಾಲಿನ ಶಿಲ್ಪಕಲಾ ಸಂಚಾರಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 4, (ಕರ್ನಾಟಕ ವಾರ್ತೆ) :

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಶಿಲ್ಪಕಲೆಯಲ್ಲಿ 2018–19 ನೇ ಸಾಲಿನ 'ಶಿಲ್ಪಕಲಾ ಸಂಚಾರ' ಪ್ರವಾಸಕ್ಕಾಗಿ ಶಿಲ್ಪಕಲೆಯಲ್ಲಿ ಬಿಎಫ್‌ಎ ಹಾಗೂ ಎಂಎಫ್‌ಎ ಪದವೀಧರರು ಹಾಗೂ ವೃತ್ತಿನಿರತ ಶಿಲ್ಪಕಲಾವಿದರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಶಿಲ್ಪಕಲೆಯಲ್ಲಿ ಬಿಎಫ್‌ಎ ಹಾಗೂ ಎಂಎಫ್‌ಎ ಪದವೀಧರರಾಗಿರಬೇಕು. ವೃತ್ತಿನಿರತ ಶಿಲ್ಪಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಅರ್ಹರಾದ 10 ಮಂದಿ ಕಲಾವಿದರನ್ನು ಆಯ್ಕೆ ಮಾಡಲಾಗುತ್ತಿದೆ. ಅರ್ಜಿದಾರರ ವಯೋಮಿತಿ ಕನಿಷ್ಠ 21 ವರ್ಷದಿಂದ ಗರಿಷ್ಠ 45 ವರ್ಷ ಮೀರತಕ್ಕದ್ದಲ್ಲ.

ಶಿಲ್ಪಕಲಾ ಸಂಚಾರಕ್ಕೆ ಆಯ್ಕೆಯಾದ ಶಿಲ್ಪಕಲಾವಿದರು ಪ್ರವಾಸ ಸ್ಥಳ ರೇಖಾಚಿತ್ರಕ್ಕೆ ಸಂಬಂದಿಸಿದಂತೆ ಅಂತಿಮ 20 ರೇಖಾಚಿತ್ರ ಹಾಗೂ ಛಾಯಾಚಿತ್ರಗಳನ್ನು ಅಕಾಡೆಮಿಗೆ ಸಲ್ಲಿಸತಕ್ಕದ್ದು.

ಬೇಲೂರು, ಹಳೇಬೀಡು, ಬಾದಾಮಿ, ಹಂಪಿ, ಪಟ್ಟದಕಲ್ಲು, ಶ್ರವಣಬೆಳಗೊಳ, ಅಮೃತೇಶ್ವರ, ಅರಸೀಕೆರೆಯ ಶಿವಾಲಯ, ಲಕ್ಕುಂಡಿ, ಸೋಮನಾಥಪುರ, ತಲಕಾಡು, ಭದ್ರಾವತಿಯ ಲಕ್ಷ್ಮೀನರಸಿಂಹದೇವಾಲಯ, ಬಳ್ಳಿಗಾವಿಯ ಕೇದಾರೇಶ್ವರ ದೇವಲಯ ಸ್ಥಳಗಳಲ್ಲದೇ ಅಕಾಡೆಮಿಯು ಸೂಚಿಸುವ ಬೇರೆ ಸ್ಥಳಗಳಿಗೆ ಸಂಚಾರ ಹೋಗಲು ಸೂಚಿಸಿದಲ್ಲಿ ಪ್ರವಾಸ ಮಾಡಲು ಸಿದ್ಧರಿರತಕ್ಕದ್ದು.

ಶಿಲ್ಪಕಲಾವಿದರಿಗೆ ಕಲಾಸಂಚಾರ ಪ್ರವಾಸ ಕೈಗೊಂಡ ರೇಖಾಚಿತ್ರ ಹಾಗೂ ಛಾಯಾಚಿತ್ರಗಳನ್ನು ಸಲ್ಲಿಸಿದ ನಂತರ ಒಟ್ಟು ರೂ 20,000/– ಗಳನ್ನು ನೀಡಲಾಗುತ್ತದೆ.

ಶಿಲ್ಪಕಲಾ ಸಂಚಾರದ ನಿಯಮಗಳನ್ನು ಸ್ಪಷ್ಟವಾಗಿ ತಿಳಿದುಕೊಂಡು ಅಕಾಡೆಮಿಯ ನಿಯಮದಂತೆ ನಡೆದುಕೊಳ್ಳುವುದು.

ಅಕಾಡೆಮಿಯ ಪರಿಣಿತರ ಸಮಿತಿಯು ಶಿಲ್ಪಕಲಾ ಸಂಚಾರಕ್ಕಾಗಿ ಬರುವ ಎಲ್ಲಾ ಅರ್ಜಿಗಳನ್ನು ಪರಾಮರ್ಶಿಸಿ, ಸಂದರ್ಶನದ ಮೂಲಕ ಶಿಲ್ಪಕಲಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ/ಸಾಧನೆಗಳನ್ನು ಹಾಗೂ ಅರ್ಜಿಯೊಂದಿಗೆ ತಾವು ಸಲ್ಲಿಸುವ ರೇಖಾಚಿತ್ರಗಳನ್ನು ಪರಿಗಣಿಸಿ, ಸಾಮಾನ್ಯ ವರ್ಗ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಸೇರಿದಂತೆ ಅರ್ಹರಾದ ಒಟ್ಟು 10 ಮಂದಿ ಶಿಲ್ಪಕಲಾವಿದರನ್ನು ಆಯ್ಕೆ ಮಾಡಲಾಗುತ್ತದೆ.

ಆಯ್ಕೆಯಾದ ಕಲಾವಿದರು ಅಕಾಡೆಮಿಯು ನಿಗದಿಪಡಿಸಿದ ಅವಧಿಯೊಳಗೆ ತಮ್ಮ ರೇಖಾಚಿತ್ರಗಳನ್ನು ಪೂರ್ಣಗೊಳಿಸಿ ಅಕಾಡೆಮಿಗೆ ಸಲ್ಲಿಸುವುದು.

ಶಿಲ್ಪಕಲಾ ಸಂಚಾರಕ್ಕೆ ಆಯ್ಕೆಯಾದವರು ಒಂದು ವೇಳೆ ಅರ್ಜಿದಾರರು ಕೇಂದ್ರ/ರಾಜ್ಯ ಸರ್ಕಾರದ ಇಲಾಖೆಯಲ್ಲಿ/ಸಂಘಟನೆಗಳಲ್ಲಿ/ಉದ್ದಿಮೆಗಳಲ್ಲಿ/ವಿಶ್ವವಿದ್ಯಾಲಯಗಳಲ್ಲಿ/ಯು.ಜಿ.ಸಿ ಅನುದಾನಿತ ಕಾಲೇಜುಗಳಲ್ಲಿ ನೌಕರಿ ಮಾಡುತ್ತಿದ್ದಲ್ಲಿ ಅಂತಹವರು ಅರ್ಜಿಯನ್ನು ಸಂಬಂಧಿಸಿದ ಮೇಲಾಧಿಕಾರಿಗಳ ಮೂಲಕ ಸಲ್ಲಿಸಬೇಕು.

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಕಲಾ ಸಂಚಾರಕ್ಕೆ ಆಯ್ಕೆಯಾಗಿದ್ದಲ್ಲಿ ಅಂತಹ ಶಿಲ್ಪಕಲಾವಿದರ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಶಿಲ್ಪ ಕಲಾವಿದರು ಸಿದ್ಧಪಡಿಸಿದ ರೇಖಾಚಿತ್ರಗಳ ಪೂರ್ಣ ಹಕ್ಕು ಅಕಾಡೆಮಿಯದಾಗಿರುತ್ತದೆ. ಶಿಲ್ಪಕಲಾ ಸಂಚಾರ ಪ್ರವಾಸ ಪೂರ್ಣವಾಗಿ ಶಿಲ್ಪಕಲಾ ಕ್ಷೇತ್ರಕಾರ್ಯ ಆಧರಿಸಿಯೇ ಸಿದ್ಧಪಡಿಸಬೇಕು.

ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಕಾಡೆಮಿಯ ತೀರ್ಮಾನವೇ ಅಂತಿಮ ತೀರ್ಮಾನ.

ಅಪೇಕ್ಷಾ ಪತ್ರವನ್ನು ನಿಖರ ಮಾಹಿತಿಯೊಂದಿಗೆ ಭರ್ತಿಮಾಡಿ, ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ಇವರಿಗೆ ಸಲ್ಲಿಸುವುದು. ಅರ್ಜಿಗಳನ್ನು ಅಕಾಡೆಮಿಯ ಅಂತರ್ಜಾಲ ಮೂಲಕ www.karnatakakashilpakalaacademy.org ಪಡೆಯಬಹುದು.

ಭರ್ತಿಮಾಡಿದ ಅರ್ಜಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡ ಭವನ, 1ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು – 560 002, ಇವರಿಗೆ ರಿಜಿಸ್ಟರ್ಡ್ ಅಂಚೆ/ಕೊರಿಯರ್ ಮೂಲಕ ಅಥವಾ ಖುದ್ದಾಗಿ ದಿನಾಂಕ: 04–10–2018 ರೊಳಗೆ ತಲುಪಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 944/1044**

## ಸ್ಥಿರಾಸ್ತಿಗಳ ನೋಂದಣಿಗಾಗಿ
## ತಾತ್ಕಾಲಿಕ ಮಾರ್ಗಸೂಚಿ ದರ ಲಭ್ಯ

ಬೆಂಗಳೂರು, ಸೆಪ್ಟೆಂಬರ್ 4, (ಕರ್ನಾಟಕ ವಾರ್ತೆ) :

ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗೆ ಸಂಬಂಧಪಟ್ಟ ಉಪನೋಂದಣಿ ಕಚೇರಿಗಳ ವ್ಯಾಪ್ತಿಯಲ್ಲಿ ಬರುವ ಸ್ಥಿರಾಸ್ತಿಗಳ ನೋಂದಣಿಗಾಗಿ ಅಂದಾಜು ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ದರಗಳ ತಾತ್ಕಾಲಿಕ ಅಧಿಸೂಚನೆಯ ಪಟ್ಟಿಯನ್ನು ಹೊರಡಿಸಲಾಗಿದೆ.

ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಸರ್ಕಾರದ ವಿಶೇಷ ರಾಜ್ಯ ಪತ್ರದಲ್ಲಿ (Extraordinary Gazette) ಪ್ರಕಟಿಸಲಾಗಿದೆ. ತಾತ್ಕಾಲಿಕ ಮಾರ್ಗಸೂಚಿ ದರಗಳನ್ನು ಜಿಲ್ಲಾ ನೋಂದಣಿ ಕಚೇರಿ, ಉಪ ನೋಂದಣಿ ಕಚೇರಿ, ಜಿಲ್ಲಾಧಿಕಾರಿಗಳ ಕಚೇರಿ, ಜಿಲ್ಲಾ ಪಂಚಾಯತ್, ನಗರದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಘೂ ತಹಶೀಲ್ದಾರ್ ಕಚೇರಿಗಳಲ್ಲಿ ಹಾಗೂ ವೆಬ್‌ಸೈಟ್ ವಿಳಾಸ 'www.karnataka.gov.in /karigr' ರಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಲಭ್ಯವಿದ್ದು, ಈ ಬಗ್ಗೆ ಆಕ್ಷೇಪಣೆಗಳೇನಾದರು ಇದ್ದಲ್ಲಿ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿವಸಗಳೊಳಗಾಗಿ ಸದಸ್ತ ಕಾರ್ಯದರ್ಶಿಗಳು, ಕೇಂದ್ರ ಮೌಲ್ಯಮಾಪನ ಹಾಗೂ ನೋಂದಣಿ ಉಪ ಮಹಾಪರಿವೀಕ್ಷಕರು, ಕೇಂದ್ರ ಮೌಲ್ಯ ಮಾಪನ ಸಮಿತಿ ಇವರಿಗೆ ಮೇಲೆ ತಿಳಿಸಿದ ವಿಳಾಸಕ್ಕೆ ಅಂಚೆ ಮೂಲಕವಾಗಲೀ ಅಥವ ಖುದ್ದಾಗಿ ಕಳುಹಿಸಲು ತಿಳಿಸಲಾಗಿದೆ. "ಪ್ರಕಟಿಸಿದ ದಿನಾಂಕದಿಂದ 15 ದಿವಸಗಳ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ" ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 945/1045**

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು,, ಸೆಪ್ಟೆಂಬರ್ 4, (ಕರ್ನಾಟಕ ವಾರ್ತೆ) :

ಕರ್ನಾಟಕ ಲೋಕಸೇವಾ ಆಯೊಗವು ರಾಜ್ಯದ ವಿವಿಧ ಇಲಾಖೆಗಳಲ್ಲಿನ 341 ದ್ವಿತೀಯ ದಜೆ ಸಹಾಯಕರ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ದಿನಾಂಕ 01-09-2018 ರಂದು ಆಯೋಗದ ಅಂತರ್ಜಾಲ ತಾಣ http://kpsc.kar.nic.in"List Provisional" ದಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಈ ಆಯ್ಕೆಪಟ್ಟಿ ಪ್ರಕಟಿಸಿದ ದಿನಾಂಕದಿಂದ 7 ದಿನಗಳೊಳಗೆ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ,"ಉದ್ಯೋಗ ಸೌಧ" ಬೆಂಗಳೂರು – 560 001 ಇವರಿಗೆ ಸಲ್ಲಿಸಬಹುದಾಗಿದೆ. ನಿಗದಿಪಡಿಸಿದ ಕೊನೆಯ ದಿನಾಂಕ:07-09-2018 ರ ನಂತರ ಸ್ವೀಕರಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಸಂಖ್ಯೆ: 946/1046

# ಉದ್ಯೋಗ ಸೃಜನ ಯೋಜನೆ – ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು,, ಸೆಪ್ಟೆಂಬರ್ 4, (ಕರ್ನಾಟಕ ವಾರ್ತೆ) :

2018–19ನೇ ಸಾಲಿನ ಮುಖ್ಯಮಂತ್ರಿಗಳ ಉದ್ಯೋಗ ಸೃಜನ ಯೋಜನೆ (ಸಿಎಂಇಜಿಪಿ) ಯಡಿಯಲ್ಲಿ ಗ್ರಾಮೀಣ ಪ್ರದೇಶದ ಯುವಕ–ಯುವತಿಯರು ಸೂಕ್ಷ್ಮ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ತೇಜಿಸಿ ಅವರನ್ನು ಮೊದಲ ಪೀಳಿಗೆ ಉದ್ಯಮಿಗಳನ್ನಾಗಿ ಮಾಡಲು ಅರ್ಹಗ್ರಾಮೀಣ ಪ್ರದೇಶದ ಯುವಕ–ಯುವತಿಯರಿಮದ ಸಾಲ ಸೌಲಭ್ಯಕ್ಕಾಗಿ ಆಫ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಯೋಜನೆಯ ವ್ಯಾಪ್ತಿ – ರೆವಿನ್ಯೂ ದಾಖಲೆಗಳ ಪ್ರಕಾರ ವರ್ಗಿಕರಿಸಿರುವ ಯಾವುದೇ ಗ್ರಾಮೀಣ ಪ್ರದೇಶ ಹಾಗೂ 2001 ರ ಜನಗಣತಿಯಂತ 20,000 ಜನಸಂಖ್ಯೆ ಮಿತಿಗೊಳಪಟ್ಟ ಪಟ್ಟಣ ಪ್ರದೇಶಗಳು.

ಗರಿಷ್ಠ ಯೋಜನಾ ವೆಚ್ಚ – ರೂ 10.00 ಲಕ್ಷಗಳ ಮಿತಿಗೊಳಪಟ್ಟ ಯೋಜನೆಗಳಿಗೆ ಮಾತ್ರ ಅವಕಾಶ.

ಸಹಾಯಧನ – ಸಾಮಾನ್ಯ ವರ್ಗಕ್ಕೆ ಶೇ 25 ರಷ್ಟು ಹಾಗೂ ವಿಶೇಷ ವರ್ಗಕ್ಕೆ (ಪ.ಜಾತಿ/ಪ.ವರ್ಗ/ಹಿ.ವರ್ಗ/ಅಲ್ಪ ಸಂಖ್ಯಾತರು/ಮಾಜಿ ಸೈನಿಕರು/ಅಂಗವಿಕಲರು/ಶೇ 35 ರಷ್ಟು.

ಅರ್ಹ ಬ್ಯಾಂಕುಗಳು – ಎಲ್ಲಾ ರಾಷ್ಟ್ರೀಕೃತ, ವಾಣಿಜ್ಯ ಮತ್ತು ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳು. ವಯಸ್ಸು – ಕನಿಷ್ಠ 8ನೇ ತರಗತಿ ಉತ್ತೀರ್ಣರಾಗಿರಬೇಕು.

ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು – ನಿಗಿದಿತ ನಮೂನೆಯಲ್ಲಿ ಅರ್ಜಿ. ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಯೋಜನಾ ವರದಿ, ವಯಸ್ಸಿನ ದಾಖಲಾತಿ, ವಿದ್ಯಾರ್ಹತೆಯ ದಾಖಲಾತಿ, ಮತದಾರರ ಗುರುತಿನ ಚೀಟಿ/ಆಧಾರ ನೋಂದಣಿ ಪ್ರತಿ, ಘಟಕದ ಹಾಗೂ ವಾಸ ಸ್ಥಳ ಗ್ರಾಮೀಣ ಪ್ರದೇಶ ಎಂಬ ಬಗ್ಗೆ ದೃಢೀಕರಣ, ಜಾತಿ ಪ್ರಮಾಣ ಪತ್ರ, ಅಂಗವಿಕಲ/ಮಾಜಿ ಸೈನಿಕ ಪ್ರಮಾಣ ಪತ್ರ ಮತ್ತು ಉದ್ಯಮಶೀಲತಾ ತರಬೇತಿ ಪಡೆದಿದ್ದಲ್ಲಿ ಪ್ರಮಾಣ ಪತ್ರ.

ಅರ್ಹ ಚಟುವಟಿಕೆಗಜಳು – ನೂತನ ಕೈಗಾರಿಕಾ ನೀತಿಯಲ್ಲಿನ ಹಾಗೂ ಪಿಎಂಇಜಿಪಿ ಯೋಜನೆಯಡಿಯಲ್ಲಿ ಅರ್ಹವಲ್ಲದ ಚಟುವಟಿಕೆಗಳನ್ನು ಹೊರತುಪಡಿಸಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15–09–2018.

ಒಂದು ಕುಟುಂಬದಲ್ಲಿ ಒಬ್ಬ ವ್ಯಕ್ತಿಗೆ ಮಾತ್ರ ಅವಕಾಶವಿರುತ್ತದೆ. ಯಾವುದಾದರು ಬೇರೆ ಯೊಜನೆಗಳಲ್ಲಿ ಉದ್ದಿಮೆ ಸ್ಥಾಪನೆಗೆ ಸಾಲ ಸೌಲಭ್ಯ ಪಡೆದಿದ್ದಲ್ಲಿ ಈ ಯೋಜನೆಯಲ್ಲಿ ಅವಕಾಶವಿರುವುದಿಲ್ಲ. ಅರ್ಜಿಗಳನ್ನು ದಿನಾಂಕ: 15–09–2018 ರೊಳಗಾಗಿ ನಲ್ಲಿರುವ ಅರ್ಜಿಗಳನ್ನು ಮುದ್ರಿಸಿಕೊಂಡು ಅಗತ್ಯ ದಾಖಲೆಗಳೊಂದಗಿಎ ಜಂಟಿ ನಿದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ,

ಬೆಂಗಳೂರು ನಗರ ಜಿಲ್ಲೆ, ರಾಜಾಜಿನಗರ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು – 560 010 ಕಚೇರಿಗೆ ಸಲ್ಲಿಸುವುದು ಅಥವಾ ದೂರವಾಣಿ ಸಂಖ್ಯೆ 080–23501478 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 947/1047**

## ಸಹಾಯವಾಣಿ ಪ್ರಾರಂಭ

ಬೆಂಗಳೂರು,, ಸೆಪ್ಟೆಂಬರ್ 4, (ಕರ್ನಾಟಕ ವಾರ್ತೆ) :

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಆಗಮಿಸುವ ಕಲಾವಿದರಿಗೆ ಹಾಗೂ ಸಾರ್ವಜನಿಕರಿಗೆ ಇಲಾಖೆ ಯೋಜನೆಗಳ ಬಗ್ಗೆ ಮಾಹಿತಿ ನೀಡಲು ಹಾಗೂ ಅವರು ಸಲ್ಲಿಸಿದ ಮನವಿಗಳ ಕುರಿತು ಕೈಗೊಂಡಿರುವ ಕ್ರಮದ ಬಗ್ಗೆ ಅವರಿಗೆ ಸೂಕ್ತ ಮಾಹಿತಿ ನೀಡುವ ಸಲುವಾಗಿ "ಸಹಾಯವಾಣಿ" ಪ್ರಾರಂಭಿಸಲಾಗಿದೆ.

ಇಲಾಖೆಯ ಪ್ರಮುಖ ಯೋಜನೆಗಳಾದ ಪ್ರಾಯೋಜನೆ, ಧನಸಹಾಯ, ಮಾಸಾಶನ ಮತ್ತು ಇತರೆ ಯೋಜನೆಗಳ ಸೌಲಭ್ಯ ಪಡೆಯುವ ಪ್ರಕ್ರಿಯೆಯ ಮಾಹಿತಿಯನ್ನು ಮತ್ತು ಕಾರ್ಯಕ್ರಮಗಳ ವಿವರವನ್ನು ಸಾರ್ವಜನಿಕರಿಗೆ ಒದಗಿಸುವ ದೃಷ್ಠಿಯಿಂದ ಸಹಾಯವಾಣಿ ಸಂಖ್ಯೆ 080–22227478 ಕಾರ್ಯನಿರ್ವಹಿಸುತ್ತಿದ್ದು ಈ ಸಂಖ್ಯೆ ಸಂಪರ್ಕಿಸುವ ಮೂಲಕ ಸಾರ್ವಜನಿಕರು, ಕಲಾವಿದರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಎಂದು ಇಲಾಖಾ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 948/1048**

## "ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಕಾಯಿದೆ" ಯಡಿ ದೊರೆಯುವ ಸೌಲಭ್ಯಗಳ ವಿವರ

ಬೆಂಗಳೂರು,, ಸೆಪ್ಟೆಂಬರ್ 4, (ಕರ್ನಾಟಕ ವಾರ್ತೆ) :

ಸಾರ್ವಜನಿಕ ಶಿಕ್ಷಣ ಇಲಾಖೆಯು "ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಕಾಯಿದೆ – ಸೆಕ್ಷನ್ 12(1) (ಸಿ) ಅಡಿ ದಾಖಲಾದ ಮಕ್ಕಳಿಗೆ ದೊರೆಯುವ ಸೌಲಭ್ಯಗಳ ವಿವರಗಳ ಪ್ರಕಟಣೆ ನೀಡಿದೆ.

- ಸೆಕ್ಷನ್ 12 (2) ರಂತೆ ಇಲಾಖೆಯು ಪೂರ್ವ ಪ್ರಾಥಮಿಕ ತರಗತಿಯಲ್ಲಿನ ಪ್ರತಿ ವಿದ್ಯಾರ್ಥಿಗೆ ಗರಿಷ್ಠ ರೂ 8000/– ಮತ್ತು ಪ್ರಾಥಮಿಕ ಶಾಲಾ ವಿದ್ಯಾಥಿಗೆ ಗರಿಷ್ಠ ರೂ 16,000/–+.
- ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆಗಳಲ್ಲಿ ಆರ್.ಟಿ.ಇ. ವಿದ್ಯಾರ್ಥಿಗಳಿಗೆ 2017–18 ನೇ ಸಾಲಿನಿಂದಲೇ ಪಠ್ಯಪುಸ್ತಕಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ.
- ಶಾಲೆಯ ಗ್ರಂಥಾಲಯ, ಮಾಹಿತಿ ತಂತ್ರಜ್ಞಾನ ಸೌಲಭ್ಯಗಳು, ಸಹಪಠ್ಯ ಚಟುವಟಿಕೆಗಳು ಮತ್ತು ಕ್ರೀಡೆಗಳಿಗೆ ವಿದ್ಯಾರ್ತಿಗಳಪೋಷಕರಿಂದ ಯಾವುದೇ ಶುಲ್ಕ ಸಂಗ್ರಹಿಸುವಂತಿಲ್ಲ.
- ಇತರೆ ಮಕ್ಕಳಿಗೆ ಮಧ್ಯಾಹ್ನದ ಊಟ ಒದಗಿಸುತ್ತಿರುವ ಶಾಲೆಗಳಲ್ಲಿ ಆರ್.ಟಿ.ಇ. ಮಕ್ಕಳಿಎ ಯಾವುದೇ ಶುಲ್ಕ ಸಂಗ್ರಹಿಸದೇ ಉಚಿತವಾಗಿ ಒದಗಿಸತಕ್ಕದ್ದು.
- ರಾಜ್ಯದ ಯಾವುದೇ ಶಾಲೆಯು ಪಠ್ಯ ಪುಸ್ತಕಗಳು ಮತ್ತು ಸಮವಸ್ತ್ರಗಳನ್ನು ನಿರ್ಧಿಷ್ಠ ಮಾರಾಟಗಾರರಿಂದ ಖರೀದಿಸುವಂತೆ ಪಾಲಕರಿಗೆ ಒತ್ತಾಯಿಸುವುದನ್ನು ನಿರ್ಬಧಿಸಿದೆ.
- ನಿಗದಿಪಡಿಸಿದ ಪಠ್ಯ ಪುಸ್ತಕಗಳು ಮತ್ತು ಸಮವಸ್ತ್ರಗಳನ್ನು ಮುಕ್ತ ಮಾರುಕಟ್ಟೆಯಿಂಧ ಖರೀದಿಸಲು ಪಾಲಕರು ಸ್ವತಂತ್ರರಾಗಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು 2017–2018 ನೇ ಸಾಲಿನಿಂದ ಕಡ್ಡಾಯವಾಗಿ ಪಾಲಿಸಲು ಇಲಾಖೆಯು ಅಗತ್ಯ ಕ್ರಮವಹಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ), ರಾಜ್ಯದ ಎಲ್ಲಾ ತಾಲ್ಲೂಕು/ವಲಯಗಳ ಕ್ಷೇತ್ರಶಿಕ್ಷಣಾದಿಕಾರಿಗಳಿಗೆ ಹಾಗೂ ಸಂಬಂಧಿಸಿದ ಶಾಲೆಗಳಿಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಸೂಕ್ತ ನಿರ್ದೇಶನ ನೀಡಲಾಗಿದೆ ಎಂದು ಪ್ರಾಥಮಿಕ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 949/1049**

## ಎಸಿಬಿ ದಾಳಿ

**ಬೆಂಗಳೂರು, ಸೆಪ್ಟೆಂಬರ್ 04, (ಕರ್ನಾಟಕ ವಾರ್ತೆ):**

**ಇಂದು ಭ್ರಷ್ಟಾಚಾರ ನಿಗ್ರಹ ದಳವು ಶ್ರೀ.ಕೆ.ಶಂಕರ ನಾಯಕ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ರಾಯಚೂರು ಎಂಬುವವರು ತಮ್ಮ ಬಲ್ಲ ಮೂಲಗಳಿಂದ ಅಸಮತೋಲನ ಆಸ್ತಿ ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿಗಳಿಕೆ ಪ್ರಕರಣವನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ ಅವರ ಕುಟುಂಬದವರು**

ವಾಸವಿರುವ ಮನೆಯಾದ ಕೆ.ಹೆಚ್.ಬಿ ಕಾಲೋನಿ, ರಾಯಚೂರು ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ ಮೇಲೆ ದಾಳಿ ನಡೆಸಲಾಗಿರುತ್ತದೆ.

ಎಸಿಬಿ ರಾಯಚೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಎಸಿಬಿ ವಿವಿಧ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ದ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ–ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 950/1050**

# ACB Raid

Bengaluru, September 4 (Karnataka Information)

Today ACB has conducted raids over the properties of Shri.K.Shankar Nayak, AEE, Panchayat Raj Engineering Sub-division, Raichur who is belived to have amassed disproportionate assets beyond his known sources of income.

Raids were conducted at Two places connected to this official 1) his place of residence at KHB Colony, Raichur and 2) Office are being searched.

A Case against the official mentioned above is registered at Raichur ACB police station. Search and verification of properties by the ACB teams is continued to find out the source of income and other possible places for the search says official press release.

**ಸಂಖ್ಯೆ: 951/1051**

# ೮೩೩ ಚಾಲಕ-ಕಂ-ನಿರ್ವಾಹಕ ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟ

**ಬೆಂಗಳೂರು, ಸೆಪ್ಟೆಂಬರ್ 04, (ಕರ್ನಾಟಕ ವಾರ್ತೆ):**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ**ಯ** ಮಂಗಳೂರು, ಚಾಮರಾಜನಗರ ಮತ್ತು ಪುತ್ತೂರು ವಿಭಾಗಗಳಿಗೆ ಪ್ರತ್ಯೇಕವಾಗಿ ಚಾಲಕ-ಕಂ-ನಿರ್ವಾಹಕ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು,

ಒಟ್ಟು ೮೩೩ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ದಿನಾಂಕ: ೩-೯-೨೦೧೮ ರಂದು ಸಂಸ್ಥೆಯ ಸೂಚನಾ ಫಲಕದಲ್ಲಿ ಮತ್ತು ನಿಗಮದ ವೆಬ್-ಸೈಟ್ ಆದ www.ksrtcjobs.com ನಲ್ಲಿ ಪ್ರಕಟಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.